# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 30-07-2022

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್ :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1-ಸಿಂ-07: 355 :2022-23 ದಿನಾಂಕ:02-12-2022

ಮಾನ್ಯರೆ,

ವಿಷಯ: ದಿನಾಂಕ:30-07-2022ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ- III ರ ಪ್ರಕರಣ- 16 ರನ್ವಯ ದಿನಾಂಕ:30-07-2022 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾ ಭವನದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಯನ್ನು ದಿನಾಂಕ: 10.11.2022ರ ಸಿಂಡಿಕೇಟ್ ಸಭೆಯಲ್ಲಿ ದೃಢೀಕರಿಸಲಾಗಿರುತ್ತದೆ. ಆದ್ದರಿಂದ ಸದರಿ ಸಿಂಡಿಕೇಟ್ ಸಭಾ ನಡಾವಳಿಯನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:30-07-2022 ರಂದು ಶನಿವಾರ ಪೂರ್ವಾಹ್ನ :11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ರಾಜಶೇಖರ್ ಹೆಬ್ಬಾರ್, ಸಿ., ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 14. | ಶ್ರೀ. ಬಿ.ಸಿ. ಬಸವರಾಜಪ್ಪ., ಪ್ರಾಂಶುಪಾಲರು, | ಸದಸ್ಯರು |
| 15. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 17. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡಿ ಲಿಫ್ಟ್ ದುರಸ್ಥಿಗೆ ಬಂದು ಬಹಳ ದಿನಗಳಾಗಿದ್ದರೂ ದುರಸ್ಥಿ ಮಾಡಿಸಿರುವುದಿಲ್ಲ ಇದರಿಂದ ಎಲ್ಲರಿಗೂ ಬಹಳ ತೊಂದರೆಯಾಗುತ್ತದೆ ಎಂದು ಹೇಳಿದರು. ಕುಲಸಚಿವರು ಮಾತನಾಡಿ ದುರಸ್ಥಿಗೆ ಸಂಬಂಧಪಟ್ಟ ಕಂಪನಿಯವರೇ ಬರಬೇಕು ಅದರಿಂದ ವಿಳಂಬವಾಗುತ್ತಿದೆ ಎಂದರು. ಕುಲಪತಿಗಳು ಮಾತನಾಡಿ ದುರಸ್ಥಿಗೆ ರೂ. 2.50 ಲಕ್ಷಗಳು ಬೇಕಾಗುತ್ತದೆ ಎಂದು ಹೇಳಿದರು. ಇದಕ್ಕೆ ಎಲ್ಲಾ ಸದಸ್ಯರು ಅನಿವಾರ್ಯತೆ ಇರುವುದರಿಂದ ದುರಸ್ಥಿ ಮಾಡಿಸಿ ಎಂದು ಒತ್ತಾಯಿಸಿದರು.

ನಂತರ ಮಾತನಾಡಿದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಸಿಂಡಿಕೇಟ್ ಸಭೆಯ ಅಜೆಂಡಾವನ್ನು ಬಹಳ ವಿಳಂಬವಾಗಿ ಸಭೆಯ ಹಿಂದಿನ ದಿನ ತಲುಪುವಂತೆ ಕಳುಹಿಸಿರುತ್ತೀರಿ ಇದಕ್ಕೆ ಕಾರಣವೇನು ಎಂದು ಕೇಳಿದರು. ಕುಲಸಚಿವರು ಸಭೆಯ ದಿನಾಂಕದವರೆಗೂ ಸಭೆಯ ಅಜೆಂಡಾದಲ್ಲಿ ಸೇರಿಸಬೇಕಾದ

ವಿಷಯಗಳು ಬರುತ್ತಾ ಇರುವುದರಿಂದ ವಿಳಂಭವಾಗುತ್ತಿದೆ ಎಂದು ಹೇಳಿದರು. ಇದಕ್ಕೆ ಸದಸ್ಯರು ನಿಗದಿತ ದಿನಾಂಕದೊಳಗೆ ಸಲ್ಲಿತವಾಗುವ ವಿಷಯಗಳ ಅಜೆಂಡಾ ಕಳುಹಿಸಿಕೊಡಿ. ಉಳಿದವುಗಳನ್ನು ನಂತರ ಕಳುಹಿಸಲು ತಿಳಿಸಿದರು. ಇದಕ್ಕೆ ಒಪ್ಪಲಾಯಿತು.

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡಿ ಎಲಾ ಸಿಂಡಿಕೇಟ್ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿದರು. ಇತ್ತೀಚೆಗೆ ನಾನು ಯುಜಿಸಿಯ ಶ್ರೀ ಜಗದೀಶ್‌ಕುಮಾರ್ ಇವರನ್ನು ಭೇಟಿ ಮಾಡಿದ್ದೇನೆ ವಿಶ್ವವಿದ್ಯಾಲಯದ ಅಭಿವೃದ್ಧಿ, ಸಂಶೋಧನೆ ಮತ್ತು ವಿದ್ಯಾರ್ಥಿಗಳಿಗೆ ಸಿಗಬೇಕಾದ ಸೌಲಭ್ಯಗಳ(ವಿದ್ಯಾರ್ಥಿ ವೇತನ, ಹಾಸ್ಟೆಲ್ ಇತರೆ) ಕುರಿತು ಚರ್ಚಿಸಿದ್ದೇನೆ ಅವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು. ಎರಡನೆಯದಾಗಿ ಹೊಸ ಶಿಕ್ಷಣ ಯೋಜನೆಯು ಜಾರಿಗೆ ಬಂದಿದ್ದು, ಈ ಯೋಜನೆಯು ಸಮಗ್ರ ಶಿಕ್ಷಣ ಯೋಜನೆಯಾಗಿದೆ. ಇದು ಬೋಧಕರು ವಿದ್ಯಾರ್ಥಿಗಳೆಡೆಗೆ ಹೋಗುವಂತಾಗಿದೆ. ಅಲ್ಲದೇ ವಿದ್ಯಾರ್ಥಿಗಳು ಸೆಮಿನಾರ್, ವರ್ಕ್‌ಷಾಪ್ ಹಾಗೂ ಇತರೆ ಚಟುವಟಿಕೆಗಳಿಂದ ಕಲಿಯುತ್ತಾರೆ. ಪ್ರಸ್ತುತ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ವಿಷಯವನ್ನು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ನಾವು 21ನೇ ಶತಮಾನದಲ್ಲಿದ್ದೇವೆ. ವಿದ್ಯಾರ್ಥಿಗಳು ಹೊಸ ಹೊಸ ಚಾಲೆಂಜ್ ಗಳನ್ನು ಎದುರಿಸಿ ಹೊಸ ಹೊಸ ಅವಕಾಶಗಳನ್ನು ಪಡೆಯಬೇಕು ಎಂದರು.
ಮುಂದುವರೆದು ಮಾತನಾಡಿ ವಿಶ್ವವಿದ್ಯಾಲಯದ ಸಿಬ್ಬಂದಿಗಳು ವೇತನ ನಿಗದೀಕರಣ ಮತ್ತು ಬಡ್ತಿ ನೀಡುವಂತೆ ಕೋರಿ ಇಂದು ಮುಷ್ಕರ ಮಾಡುತ್ತಿದ್ದಾರೆ ಇದಕ್ಕೆ ಪೂರಕವಾಗಿ ಹುದ್ದೆಗಳ ಉನ್ನತೀಕರಣದ ಪರಿನಿಯಮಗಳ ಅನುಮೋದನೆಗಾಗಿ ಈಗಾಗಲೇ ಪ್ರಯತ್ನಿಸಲಾಗುತ್ತಿದೆ, ನೌಕರರ ಹಿತಾಸಕ್ತಿಯನ್ನು ಕಾಪಾಡುತ್ತೇವೆ ಎಂದು ತಿಳಿಸಿದರು.

ನಂತರ ಅಜೆಂಡಾದಲ್ಲಿರುವಂತೆ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರಗಳ ವಿಭಾಗ

**2022–ಸಿಂ–7.01:** ದಿನಾಂಕ:27–10–2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ:27–10–2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.02:** ದಿನಾಂಕ:28–02–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ: 28–02–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.03:** ದಿನಾಂಕ:08–03–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ: 08–03–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.04:** ದಿನಾಂಕ:29–03–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ: 29–03–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.05:** ದಿನಾಂಕ:02–06–2022 ರಂದು ನಡೆದ ವಿಶೇಷ ಸಿಂಡಿಕೇಟ್‌ನ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ: 02–06–2022 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.06:** ದಿನಾಂಕ:08–06–2022 ರಂದು ನಡೆದ ವಿಶೇಷ ಸಿಂಡಿಕೇಟ್‌ನ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ: 08–06–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.07:** ದಿನಾಂಕ:15–06–2022 ರಂದು ನಡೆದ ಸಿಂಡಿಕೇಟ್‌ನ ಅಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ** : ದಿನಾಂಕ: 15–06–2022 ರಂದು ನಡೆದ ಸಿಂಡಿಕೇಟ್‌ನ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಧೃಢೀಕರಿಸಿತು.

**2022–ಸಿಂ–7.07(ಎ) :** STATUTES GOVERNING THE ESTABLISHMENT OF BHARATHA RATNA DR. C.N.RAO STUDY CENTER AT KUVEMPU UNIVERSITY AND THE INSTITUTION OF POSTS IN THE CENTRE ಪರಿನಿಯಮ ಅನುಮೋದನೆ ಕುರಿತು.

**ನಿರ್ಣಯ** : STATUTES GOVERNING THE ESTABLISHMENT OF BHARATHA RATNA DR. C.N.RAO STUDY CENTER AT KUVEMPU UNIVERSITY AND THE INSTITUTION OF POSTS IN THE CENTRE ಪರಿನಿಯಮವನ್ನು ಸಭೆಯು ಅನುಮೋದಿಸಿತು.

**2022–ಸಿಂ–7.07(ಬಿ) :** STATUTES RELATING TO ESTABLISHMENT OF POST-GRADUATE DEPARTMENT OF FOOD TECHNOLOGY IN KUVEMPU UNIVERSITY AND INSTITUTION OF POSTS IN THE DEPARTMENT ಪರಿನಿಯಮ ಅನುಮೋದನೆ ಕುರಿತು.

**ನಿರ್ಣಯ:** STATUTES RELATING TO ESTABLISHMENT OF POST-GRADUATE DEPARTMENT OF FOOD TECHNOLOGY IN KUVEMPU UNIVERSITY AND INSTITUTION OF POSTS IN THE DEPARTMENT ಪರಿನಿಯಮವನ್ನು ಸಭೆಯು ಅನುಮೋದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2022–ಸಿಂ–7.10:** ದಿವಗಂತ ವಿ. ಚಂದ್ರಕಾಂತ್ ರಾವ್ ಬೋಸ್ಲೆ ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

**ನಿರ್ಣಯ** : ಚರ್ಚೆಯ ನಂತರ ದಿವಗಂತ ವಿ. ಚಂದ್ರಕಾಂತ್ ರಾವ್ ಬೋಸ್ಲೆ ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

**2022–ಸಿಂ–7.11:** ಡಾ. ಬಿನಾಯ್ ಟಿ.ಎ. ಸಹ ಪ್ರಾಧ್ಯಾಪಕರು, ಇವರು ಕೇರಳದ ಕೇಂದ್ರಿಯ ವಿಶ್ವವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಲಾಗಿರುವ ಕ್ರಮದ ಸ್ಥಿರೀಕರಣದ ಬಗ್ಗೆ.

**ನಿರ್ಣಯ** : ಚರ್ಚೆಯ ನಂತರ ಡಾ. ಬಿನಾಯ್ ಟಿ.ಎ. ಸಹ ಪ್ರಾಧ್ಯಾಪಕರು, ಇವರು ಕೇರಳದ ಕೇಂದ್ರಿಯ ವಿಶ್ವವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022–ಸಿಂ–7.12:** ಡಾ. ರವೀಂದ್ರನಾಥ ಎನ್. ಕದಂ ಪ್ರಾಧ್ಯಾಪಕರು, ಇವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಹೊಂದಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಲಾಗಿರುವ ಕ್ರಮದ ಸ್ಥಿರೀಕರಣದ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ಡಾ. ರವೀಂದ್ರನಾಥ ಎನ್. ಕದಂ ಪ್ರಾಧ್ಯಾಪಕರು, ಇವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಹೊಂದಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆ ಮಾಡಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

2022–ಸಿಂ–7.13: ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸಲು ಸಭೆಯು ಅನುಮೋದನೆ ನೀಡಿತು.

2022–ಸಿಂ–7.14: ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರಿಗೆ ಕುವೆಂಪು ವಿಶ್ವವಿದ್ಯಾಲಯದ ಸಕ್ಷಮ ನೇಮಕಾತಿ ಪ್ರಾಧಿಕಾರದ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡುವ ಸಂಬಂಧ ಕಾನೂನು ಅಭಿಪ್ರಾಯ ನೀಡಿರುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ದಿನಾಂಕ:08–06–2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರಿಗೆ ಕುವೆಂಪು ವಿಶ್ವವಿದ್ಯಾಲಯದ ಸಕ್ಷಮ ನೇಮಕಾತಿ ಪ್ರಾಧಿಕಾರದ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡುವ ಸಂಬಂಧ ವಿಷಯವನ್ನು ಮಂಡಿಸಲಾಗಿ ಈ ಕುರಿತು ಕಾನೂನು ಅಭಿಪ್ರಾಯ ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುವಂತೆ ನಿರ್ಣಯವಾಗಿದ್ದರಿಂದ ಅದರಂತೆ ಕಾನೂನು ಅಭಿಪ್ರಾಯ ಪಡೆಯಲಾಗಿದ್ದು, ಸಭೆಯ ಅವಗಾಹನೆಗೆ ಮಂಡಿಸಲಾಗಿದೆ ಎಂದು ಹೇಳಿದರು. ಸದಸ್ಯರು ಕಾನೂನು ಅಭಿಪ್ರಾಯವನ್ನು ಪರಿಶೀಲಿಸಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಮಾತನಾಡಿ ನಕಲಿ ಉತ್ತರ ಪತ್ರಿಕೆ ಪ್ರಕರಣ ನಡೆದು ಈಗಾಗಲೇ ಹತ್ತು ವರ್ಷಗಳು ಕಳೆದಿದ್ದು, ಈ ಸಂಬಂಧ ಇಲಾಖಾ ವಿಚಾರಣೆ ನಡೆದು ಶಿಕ್ಷೆಯನ್ನೂ ವಿಧಿಸಲಾಗಿದೆ ಮತ್ತೆ ಪುನ: ಈ ಪ್ರಕರಣದ ವಿಚಾರಣೆಗೆ ಅನುಮತಿ ನೀಡಿ ನಮ್ಮ ವಿಶ್ವವಿದ್ಯಾಲಯದ ನೌಕರರ ವಿರುದ್ಧ ಕ್ರಮ ಕೈಗೊಳ್ಳುವುದು ಸರಿಯಲ್ಲ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅಭಿಯೋಜನಾ ಮಂಜೂರಾತಿ ನೀಡಬಾರದು ಎಂದು ನಿರ್ಣಯವಾಗಿದೆ ಆದರೆ ಈ ನಿರ್ಣಯವನ್ನು ಪೊಲೀಸ್ ಇಲಾಖೆಗೆ ಕಳುಹಿಸಿಲ್ಲ. ಈಗ ಇದೇ ನಿರ್ಣಯಕ್ಕೆ ಬದ್ಧರಾಗಿದ್ದರೆ ಪರಿಣಾಮ ಏನಾಗುತ್ತದೆ ಎಂದು ಕೇಳಿದರು.

ಸದಸ್ಯರಾದ ಶ್ರೀ ನಟೇಶ್ ರವರು ಮಾತನಾಡಿ ಹಿಂದೆಯೇ ನಿರ್ಣಯವಾಗಿದ್ದರೂ ಮತ್ತೆ ಮತ್ತೆ ಯಾಕೆ ಚರ್ಚೆಗೆ ಮಂಡಿಸಲಾಗುತ್ತಿದೆ ಎಂದು ಕೇಳಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್ ರವರು ಮಾತನಾಡಿ ವಿಶ್ವವಿದ್ಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂದು ಕಾನೂನು ಸಲಹೆಗಾರರು ಸ್ಪಷ್ಟ ಅಭಿಪ್ರಾಯ ನೀಡಬೇಕು ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಸಹ ಕಾನೂನು ಸಲಹೆಗಾರರು ಅಭಿಯೋಜನಾ ಮಂಜೂರಾತಿ ನೀಡಬಹುದು ಅಥವಾ ನೀಡಬಾರದು ಎಂದು ಸ್ಪಷ್ಟ ಅಭಿಪ್ರಾಯ ನೀಡಬೇಕು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಬದ್ಧರಾಗಿದ್ದೇವೆ ಎಂದು ಪತ್ರ ಬರೆಯಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಇದು ವಿಶ್ವವಿದ್ಯಾಲಯದ ದೊಡ್ಡ ಹಗರಣ ಈ ಹಿಂದೆ ಅದು ಹೇಗೆ ಅಭಿಯೋಜನಾ ಮಂಜೂರಾತಿ ನೀಡಬಾರದು ಎಂದು ನಿರ್ಣಯ ಆಗಿದೆ ಎಂಬ ಬಗ್ಗೆ ಮಾಹಿತಿಯಿಲ್ಲ. ಆದರೆ ಈ ರೀತಿ ನಿರ್ಣಯ ತೆಗೆದುಕೊಂಡರೆ ತಪ್ಪಿತಸ್ಥರಿಗೆ ಬೆಂಬಲ ನೀಡಿದಂತೆ ಆಗುತ್ತದೆ. ನೌಕರರ ಹಿತಾಸಕ್ತಿ ಕಾಪಾಡುವ ಕಾಳಜಿ ನಮಗೂ ಇದೆ ಆದರೆ ಇದು ಕ್ರಿಮಿನಲ್ ಪ್ರಕರಣ ಆಗಿರುವುದರಿಂದ ಇದಕ್ಕೆ ಬೆಂಬಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಮಾತನಾಡಿ ಈಗಾಗಲೇ ಇಲಾಖಾ ವಿಚಾರಣೆ ನಡೆದು ಶಿಕ್ಷೆಯನ್ನೂ ವಿಧಿಸಲಾಗಿದೆ ಮತ್ತೆ ಪುನ: ಈ ಪ್ರಕರಣದ ವಿಚಾರಣೆಗೆ ಅನುಮತಿ ನೀಡುವುದಕ್ಕೆ ನಮ್ಮ ಒಪ್ಪಿಗೆಯಿಲ್ಲ ಎಂದು ಹೇಳಿದರು. ಸದಸ್ಯರು ಕಾನೂನು ಸಲಹೆಗಾರರು ಸ್ಪಷ್ಟ ಅಭಿಪ್ರಾಯ ನೀಡಬೇಕು ಎಂದು ಅಭಿಪ್ರಾಯಪಟ್ಟರು.

**ನಿರ್ಣಯ :** ಸುಧೀರ್ಘ ಚರ್ಚೆಯ ನಂತರ ದಿನಾಂಕ:21-07-2021ರ ಸಿಂಡಿಕೇಟ್ ಸಭೆಯಲ್ಲಿ ಅಭಿಯೋಜನಾ ಮಂಜೂರಾತಿ ನೀಡಬಾರದು ಎಂದು ನಿರ್ಣಯ ತೆಗೆದುಕೊಳ್ಳಲಾಗಿದೆ ಈಗ ಪುನ: ದಿನಾಂಕ:08-06-2022ರಂದು ಹಾಗೂ ದಿನಾಂಕ:30-07-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾಗಿರುತ್ತದೆ. ಕೆಲವು ಸದಸ್ಯರು ಅಭಿಯೋಜನಾ ಮಂಜೂರಾತಿ ನೀಡಬಾರದು ಎಂದು ಕೆಲವು ಸದಸ್ಯರು ಅಭಿಯೋಜನಾ ಮಂಜೂರಾತಿ ಪತ್ರ ನೀಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಅಭಿಯೋಜನಾ ಮಂಜೂರಾತಿ ಪತ್ರ ನೀಡಿದರೆ ಪರಿಣಾಮ ಏನಾಗುತ್ತದೆ ಅಥವಾ ಅಭಿಯೋಜನಾ ಮಂಜೂರಾತಿ ಪತ್ರ ನೀಡದಿದ್ದರೆ ಏನಾಗುತ್ತದೆ ಹಾಗೂ ವಿಶ್ವವಿದ್ಯಾಲಯವು ಅಭಿಯೋಜನಾ ಮಂಜೂರಾತಿ ನೀಡಬಹುದು ಅಥವಾ ನೀಡಬಾರದು ಎಂಬ ಬಗ್ಗೆ ಕಾನೂನು ಸಲಹೆಗಾರರು ಸ್ಪಷ್ಟ ಅಭಿಪ್ರಾಯ ನೀಡಬೇಕು. ಆದ್ದರಿಂದ ಕಾನೂನು ಸಲಹೆಗಾರರಿಂದ ಮತ್ತೊಮ್ಮೆ ಅಭಿಪ್ರಾಯ ಪಡೆಯುವಂತೆ ಸಭೆಯು ಸೂಚಿಸಿತು.

**2022-ಸಿಂ-7.15:** ಪ್ರೊ. ಎಂ. ವೆಂಕಟೇಶ್ವರಲು, ಪ್ರಾಧ್ಯಾಪಕರು, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಇವರು ತುಮಕೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡಿರುವುದರಿಂದ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸುವ ಕುರಿತು.

**ನಿರ್ಣಯ :** ಚರ್ಚೆಯ ನಂತರ ಪ್ರೊ. ಎಂ. ವೆಂಕಟೇಶ್ವರಲು, ಪ್ರಾಧ್ಯಾಪಕರು, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಇವರು ತುಮಕೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡಿರುವುದರಿಂದ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಭೆಯು ಘಟನೋತ್ತರವಾಗಿ ಅನುಮೋದನೆ ನೀಡಿತು.

**2022-ಸಿಂ-7.15(ಡಿ):** ಡಾ. ವೆಂಕಟೇಶ್ವರಲು ಎಂ., ಹಿಂದಿನ ಕುಲಸಚಿವರು(ಪರೀಕ್ಷಾಂಗ) ಇವರ ವಿರುದ್ಧ ಸಾಮೂಹಿಕ ನಕಲು ದೂರಿನ ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಮುಕ್ತವೆಂದು ಘೋಷಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ :** ಚರ್ಚೆಯ ನಂತರ ಡಾ. ವೆಂಕಟೇಶ್ವರಲು ಎಂ., ಹಿಂದಿನ ಕುಲಸಚಿವರು(ಪರೀಕ್ಷಾಂಗ) ಇವರ ವಿರುದ್ಧ ಸಾಮೂಹಿಕ ನಕಲು ದೂರಿನ ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಮುಕ್ತ ಎಂದು ಘೋಷಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-7.15(ಎ):** ವಿಶ್ವವಿದ್ಯಾಲಯದ ಲೆಕ್ಕಪತ್ರ ವಿಭಾಗದಲ್ಲಿ ಕೆ.ಎಸ್.ಎ.ಎ.ಡಿ ಇಲಾಖೆಯ ಉಪ ನಿಯಂತ್ರಕರ ಸಮನಾಂತರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಬಗ್ಗೆ.

ನಿರ್ಣಯ : ಚರ್ಚೆಯ ನಂತರ ವಿಶ್ವವಿದ್ಯಾಲಯದ ಲೆಕ್ಕಪತ್ರ ವಿಭಾಗದಲ್ಲಿ ಕೆ.ಎಸ್.ಎ.ಎ.ಡಿ ಇಲಾಖೆಯ ಉಪ ನಿಯಂತ್ರಕರ ಸಮನಾಂತರ ಹುದ್ದೆಗೆ ಸದ್ಯಕ್ಕೆ ಆರು ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

**2022–ಸಿಂ–7.15(ಬಿ):** ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಮೆ॥ಕೆ.ಎಸ್.ಎಫ್.-9, ಬೆಂಗಳೂರು ಇವರಿಗೆ ಹೊರಡಿಸಲಾದ ಕಾರ್ಯಾದೇಶವನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಮೆ॥ಕೆ.ಎಸ್.ಎಫ್.–9, ಬೆಂಗಳೂರು ಇವರಿಗೆ ಹೊರಡಿಸಲಾದ ಕಾರ್ಯಾದೇಶವನ್ನು ಸಭೆಯು ಸ್ಥಿರೀಕರಿಸಿತು.

**2022–ಸಿಂ–7.15(ಸಿ):** ಪ್ರಭಾರ ಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿದಂತೆ ತಯಾರಿಸಲಾದ ಮಾರ್ಗಸೂಚಿಯನ್ನು ಅನುಮೋದಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪ್ರಭಾರ ಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿದಂತೆ ಸಮಿತಿಯು ತಯಾರಿಸಿದ ಮಾರ್ಗಸೂಚಿಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ಮಾರ್ಗಸೂಚಿಗಳನ್ವಯ ನಾಲ್ಕೂ ಕಾಲೇಜುಗಳಿಗೆ ಹೊಸದಾಗಿ ಪ್ರಾಂಶುಪಾಲರ ನೇಮಕಾತಿ ಆಗಬೇಕಾಗುತ್ತದೆ. ಇವೆಲ್ಲದರ ಬದಲಿಗೆ ಸ್ನಾತಕೋತ್ತರ ವಿಭಾಗಗಳಲ್ಲಿ ವಿಭಾಗಾಧ್ಯಕ್ಷರು ಮತ್ತು ಡೀನರನ್ನು ಸರದಿಯ ಮೇಲೆ ನೇಮಿಸುವಂತೆ ಕಾಲೇಜುಗಳಲ್ಲಿಯೂ ಜೇಷ್ಟತೆಯನುಸಾರ ಸರದಿಯ ಮೇಲೆ 2 ಅಥವಾ 3 ವರ್ಷಗಳ ಅವಧಿಗೆ ಪ್ರಾಂಶುಪಾಲರನ್ನು ನೇಮಿಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಯುಜಿಸಿ ನಿಯಮಾವಳಿಗಳಲ್ಲಿ ಇದಕ್ಕೆ ಅವಕಾಶವಿಲ್ಲ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಯುಜಿಸಿ ಮಾರ್ಗಸೂಚಿಗಳನ್ನು ಇಟ್ಟುಕೊಂಡು ಅದರನ್ವಯ ಪ್ರಭಾರ ಪ್ರಾಂಶುಪಾಲರ ನೇಮಕಾತಿಗೆ ಮಾರ್ಗಸೂಚಿಗಳನ್ನು ಸಿದ್ದಪಡಿಸಿದ್ದೇವೆ. ಪ್ರಭಾರ ಪ್ರಾಂಶುಪಾಲರ ನೇಮಕಾತಿಗೆ ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲ ನಮ್ಮ ವಿಶ್ವವಿದ್ಯಾಲಯದಲ್ಲಿಯೇ ಪ್ರಥಮವಾಗಿ ರಚಿಸಲಾಗಿದೆ. ಯುಜಿಸಿ ಮಾರ್ಗಸೂಚಿಯನ್ವಯ ಒಂದು ಸಾರಿ ನೇಮಕ ಆದ ನಂತರ ಐದು ವರ್ಷಕ್ಕೆ ಸದರಿಯವರ ಸ್ವಯಂ ಮೌಲ್ಯಮಾಪನ ಮಾಡಬೇಕಾಗುತ್ತದೆ. ನಂತರ ಸದರಿಯವರನ್ನೇ ಮುಂದುವರೆಸಬೇಕೋ ಬೇಡವೋ ಎಂಬ ಬಗ್ಗೆ ತೀರ್ಮಾನಿಸಬೇಕು ಅದೇ ರೀತಿ ಪ್ರಭಾರ ಪ್ರಾಂಶುಪಾಲರ ಸ್ವಯಂ ಮೌಲ್ಯ ಮಾಪನಕ್ಕೆ 2 ವರ್ಷ ನಿಗದಿಪಡಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಪ್ರಭಾರ ಪ್ರಾಂಶುಪಾಲರಿಗೆ ಯಾವುದೇ ಆರ್ಥಿಕ ಅಧಿಕಾರ ಕೊಡದಿದ್ದಲ್ಲಿ ಹುದ್ದೆ ನಿಭಾಯಿಸುವುದು ಕಷ್ಟವಾಗಬಹುದು ಎಂದು ಹೇಳಿದರು.

ಆಗ ಮಾತನಾಡಿದ ಪ್ರೊ. ರಿಯಾಜ್ ಮಹಮೂದ್‌ರವರು ಪ್ರಸ್ತುತ ಇರುವ ಪ್ರಾಂಶುಪಾಲರುಗಳು ಯಾವ ಅಧಿಕಾರವನ್ನು ಹೊಂದಿದ್ದಾರೆಯೋ ಆ ಎಲ್ಲಾ ಅಧಿಕಾರಗಳನ್ನು ಪ್ರಭಾರ ಪ್ರಾಂಶುಪಾಲರು ಹೊಂದಿರುತ್ತಾರೆ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಯುಜಿಸಿ ಮಾರ್ಗಸೂಚಿಯ ಪ್ರಕಾರ ಯಾವ ರೀತಿ ಪ್ರಾಂಶುಪಾಲರ ನೇಮಕಾತಿ ಪ್ರಕ್ರಿಯೆ ನಡೆಸಬೇಕಾಗಿತ್ತೋ ಅದೇ ಪ್ರಕ್ರಿಯೆಗಳನ್ನು ಪ್ರಭಾರ ಪ್ರಾಂಶುಪಾಲರ ನೇಮಕಾತಿಯ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಲಾಗಿದೆ. ಸ್ವಯಂ ಮೌಲ್ಯಮಾಪನದ ಅವಧಿಯನ್ನು ಪ್ರಸ್ತುತ 2 ವರ್ಷ ಎಂದು ನಿಗದಿಪಡಿಸಲಾಗಿದ್ದು ಅದನ್ನು 3 ವರ್ಷಕ್ಕೆ ನಿಗದಿಪಡಿಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಪ್ರಾಧ್ಯಾಪಕರ ಜೇಷ್ಟತೆ ಹಾಗೂ ಅರ್ಹತೆ ಎರಡನ್ನೂ ಪರಿಗಣಿಸಬೇಕಾಗುತ್ತದೆ. ಸಿಂಡಿಕೇಟ್ ಸಭೆಯ ಪೂರ್ವಾನುಮೋದನೆ ಪಡೆದು ನೇಮಕ ಮಾಡಬೇಕಾಗುತ್ತದೆ.

ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿ ಕ್ರಮ ಕೈಗೊಂಡಿದ್ದಾರೆ ಪರಿಶೀಲಿಸಿ ಎಂದರು.

ಡಾ. ಬಿ.ಜಿ. ಧನಂಜಯ್‌ರವರು ಮಾತನಾಡಿ ಸರ್ಕಾರಿ ಕಾಲೇಜುಗಳಲ್ಲಿ ಸೇವೆಗೆ ಸೇರಿದ ದಿನಾಂಕ, ಅರ್ಹತೆ ಹಾಗೂ ಜೇಷ್ಟತೆಯಲ್ಲಿರುವವರಿಗೆ ಹುದ್ದೆ ನೀಡಲಾಗುತ್ತಿದೆ ಎಂದು ಹೇಳಿದರು.

ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಎಲ್ಲಾ ಅಂಶಗಳನ್ನೂ ಮಾರ್ಗಸೂಚಿಗಳಲ್ಲಿ ಸೇರಿಸಲಾಗಿದೆ. ಕಾರ್ಯ ನಿರ್ವಹಣೆಯ ವರದಿಯನ್ನು ಆಧರಿಸಿ ಆಯ್ಕೆ ಮಾಡಿದಂತೆ ಅಗುತ್ತದೆ ಈ ಮಾರ್ಗಸೂಚಿಗಳನ್ನು ಕಾನೂನು ಸಲಹೆಗಾರರ ಗಮನಕ್ಕೂ ತರಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೂ ಕಾರ್ಯನಿರ್ವಹಣೆಯನ್ನು ಆಧರಿಸಿ ಬಡ್ತಿ ನೀಡಲಾಗುತ್ತದೆ. ಆದ್ದರಿಂದ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ ಕಾರ್ಯನಿರ್ವಹಣೆಯನ್ನು ಅವಲೋಕಿಸಬೇಕಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಸಂದರ್ಶನ ಬೇಡ ಎಂದರು.

ಶ್ರೀ ಧರ್ಮಪ್ರಸಾದ್‌ರವರು ಕೂಡ ಇದನ್ನು ಅನುಮೋದಿಸಿದರು.

ಡಾ. ಬಿ.ಜಿ. ಧನಂಜಯ್‌ರವರು ಮಾತನಾಡಿ ಸಂದರ್ಶನ ಮಾಡಿಲ್ಲ ಎಂದರೆ ಪ್ರಾಂಶುಪಾಲರ ಹುದ್ದೆ ಅಭ್ಯರ್ಥಿಯ ವಿಷನ್ ಗೊತ್ತಾಗುವುದಿಲ್ಲ ಎಂದು ಹೇಳಿದರು.

ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಸಂದರ್ಶನ ಎಂಬುದರ ಬದಲಿಗೆ ಇಂಟರ್‍ಯಾಕ್ಷನ್ ಎಂದು ಮಾಡಬಹುದು ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸಂದರ್ಶನಕ್ಕೆ ಗರಿಷ್ಟ 5 ಅಂಕಗಳನ್ನು ನಿಗದಿಪಡಿಸಿ ಸಂದರ್ಶನಕ್ಕೆ ಹಾಜರಾದರೆ 2 ಅಂಕಗಳು ಗರಿಷ್ಟ 5 ಅಂಕ ನೀಡಬಹುದು ಎಂದು ಹೇಳಿದರು. ಎಲ್ಲಾ ಸದಸ್ಯರು ಇದಕ್ಕೆ ಒಪ್ಪಿದರು.

**ನಿರ್ಣಯ :** ಸುಧೀರ್ಘ ಚರ್ಚೆಯ ನಂತರ ಪ್ರಭಾರ ಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿದಂತೆ ರಚಿಸಲಾದ ಸಮಿತಿಯು ಸಿದ್ದಪಡಿಸಿದ ಮಾರ್ಗಸೂಚಿಗಳನ್ನು ಕೆಲವೊಂದು ತಿದ್ದುಪಡಿಗಳೊಂದಿಗೆ ಸಭೆಯು ಅನುಮೋದಿಸಿತು.

**2022–ಸಿಂ–7.15(ಇ):** ಪ್ರೊ. ಕೃಷ್ಣಪ್ಪ. ಎಂ., ನಿವೃತ್ತ ಪ್ರಾಧ್ಯಾಪಕರು, ಶ್ರೀ ಕುಮಾರಸ್ವಾಮಿ., ಸಹ ಪ್ರಾಧ್ಯಾಪಕರು ಮತ್ತು ಶ್ರೀ ರೋಹಿದಾಸ್ ಆರ್., ಸಹಾಯಕ ಕುಲಸಚಿವರು ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆಯ ವರದಿ ಕುರಿತು.

**ನಿರ್ಣಯ :** ಚರ್ಚೆಯ ನಂತರ ಪ್ರೊ. ಕೃಷ್ಣಪ್ಪ. ಎಂ., ನಿವೃತ್ತ ಪ್ರಾಧ್ಯಾಪಕರು, ಶ್ರೀ ಕುಮಾರಸ್ವಾಮಿ, ಸಹ ಪ್ರಾಧ್ಯಾಪಕರು ಮತ್ತು ಶ್ರೀ ರೋಹಿದಾಸ್ ಆರ್. ಸಹಾಯಕ ಕುಲಸಚಿವರು ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆಯ ವರದಿಯನ್ವಯ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಭೆಯು ಅಂಗೀಕರಿಸಿತು.

**2022–ಸಿಂ–7.15(ಎಫ್):** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ :** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-7.15:** (ಹೆಚ್): ವೃತ್ತಿ ಪದೋನ್ನತಿ (C.A.S) ಸಂಬಂಧ B.O.A. / Screening Cum Evaluation Committee ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ :** ದಿನಾಂಕ:29-07-2022ರಂದು ನಡೆದ ವೃತ್ತಿ ಪದೋನ್ನತಿ (C.A.S) ಸಂಬಂಧ B.O.A./ Screening Cum Evaluation Committee ನಡಾವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

## ಶೈಕ್ಷಣಿಕ ವಿಭಾಗ

**2022-ಸಿಂ-7.16:** "Design, Develop, Implementation & Maintenance of Fraternity Platform Infrastructure (FPI) ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಉದ್ದೇಶಿಸಿರುವ ಬಗ್ಗೆ.

**ಚರ್ಚೆ :** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ "Design, Develop, Implementation & Maintenance of Fraternity Platform Infrastructure (FPI) ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಅನುಮತಿ ನೀಡಿ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಶುಲ್ಕದಲ್ಲಿ ಶೇಕಡಾ 70:30 ಎಂದು ಹಂಚಿಕೆ ಮಾಡುವ ಯಾವುದೇ ಆರಂಭಿಕ ಮೊತ್ತವನ್ನು ಸಂಸ್ಥೆಗೆ ನೀಡದೇ ಇರುವ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿತ್ತು. ಆದರೆ ಸದರಿ ಸಂಸ್ಥೆಯವರು ಸದರಿ ತಂತ್ರಾಂಶವನ್ನು ವಿಶ್ವವಿದ್ಯಾಲಯಕ್ಕೆ ಅಳವಡಿಸಲು ಆರಂಭಿಕ ವೆಚ್ಚ ಹೆಚ್ಚು ತಗಲುತ್ತದೆ ಆದ್ದರಿಂದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಇನ್ನೊಮ್ಮೆ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಪರಿಶೀಲಿಸಿ ನಿರ್ಣಯ ಕೈಗೊಳ್ಳುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ವಿಷಯವನ್ನು ಮತ್ತೊಮ್ಮೆ ಚರ್ಚೆಗಾಗಿ ಮಂಡಿಸಲಾಗಿದೆ ಎಂದು ಹೇಳಿದರು.

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಈ ವಿಷಯದ ಕುರಿತು ಈಗಾಗಲೇ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಇದರಿಂದ ವಿಶ್ವವಿದ್ಯಾಲಯಕ್ಕೆ ಆದಾಯ ಬರುತ್ತದೆ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಶುಲ್ಕದಲ್ಲಿ ಶೇಕಡಾ 70:30 ಎಂದು ಹಂಚಿಕೆ ಹಾಗೂ ಆರಂಭಿಕ ವೆಚ್ಚ One time payment ಎಂದು ಮಾಡಬಹುದು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ತಂತ್ರಾಂಶವನ್ನು ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವೈದ್ಯಕೀಯ ಸಂಸ್ಥೆ ಹಾಗೂ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲೂ ಕೂಡ ಅಳವಡಿಸಿರುತ್ತಾರೆ ಅವರು ಆರಂಭಿಕ ವೆಚ್ಚ ನೀಡಿರುತ್ತಾರೆ ಎಂದು ಹೇಳಿದರು.

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ವೃತ್ತಿಪರ ಕೋರ್ಸುಗಳ ವಿಶ್ವವಿದ್ಯಾಲಯಗಳಿಗೂ ನಮ್ಮ ವಿಶ್ವವಿದ್ಯಾಲಯಕ್ಕೂ ಹೋಲಿಸಲು ಬರುವುದಿಲ್ಲ ಎಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡಿ ಈಗ ಎನ್.ಇ.ಪಿ ಜಾರಿಗೆ ಬಂದಿರುವುದರಿಂದ ಮುಂದೆ ಶಿಕ್ಷಣ ಯಾವ ರೀತಿ ಇರುತ್ತದೆ ಎಂಬ ಬಗ್ಗೆ ಅಂದಾಜಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಈ ತಂತ್ರಾಂಶವನ್ನು ಅಳವಡಿಸಿದರೆ ಮುಂದೆ ವಿಶ್ವವಿದ್ಯಾಲಯದ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗಬಹುದು ಎಂದು ಹೇಳಿದರು.

ಕುಲಸಚಿವರು ಮಾತನಾಡುತ್ತಾ ವಿಶ್ವವಿದ್ಯಾಲಯದಲ್ಲಿ ಆಂತರಿಕ ಸಂಪನ್ಮೂಲದ ಕೊರತೆ ಇದೆ ಎಂದು ಹೇಳಿದರು.

ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಈ ತಂತ್ರಾಂಶವನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಕುರಿತು ನನ್ನ ವಿರೋಧವಿಲ್ಲ ಆದರೆ ಪ್ರಸ್ತುತ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿ ಅಷ್ಟು ಸರಿ ಇಲ್ಲದ ಕಾರಣ ಈಗ ಅಳವಡಿಸುವುದು ಸಮಂಜಸವಲ್ಲ ಎಂಬುದು ನನ್ನ ಅಭಿಪ್ರಾಯ ಎಂದು ಹೇಳಿದರು. ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಇದನ್ನು ಅನುಮೋದಿಸಿದರು. ಇದಕ್ಕೆ ಶ್ರೀ ಬಳ್ಳೇಕೆರೆ ಸಂತೋಷ್‌ರವರು ವಿರೋಧ ವ್ಯಕ್ತಪಡಿಸಿದರು. ನಂತರ ಈ ಪ್ರಾಜೆಕ್ಟ್ ಆರಂಭಿಕ ವೆಚ್ಚ ನೀಡುವ ಕುರಿತು ನಿರ್ಣಯಿಸಲು ಅಧ್ಯಕ್ಷರಿಗೆ ಅಧಿಕಾರ ನೀಡುವಂತೆ ಸದಸ್ಯರು ಕೋರಿದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆ "Design, Develop, Implementation & Maintenance of Fraternity Platform Infrastructure (FPI) ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಅನುಮತಿ ನೀಡಿ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಶುಲ್ಕದಲ್ಲಿ ಶೇಕಡಾ 70:30 ಎಂದು ಹಂಚಿಕೆ ಮಾಡಲು ನಿರ್ಣಯಿಸಲಾಯಿತು ಹಾಗೂ ಆರಂಭಿಕ ವೆಚ್ಚ ನೀಡುವ ಕುರಿತು ನಿರ್ಣಯ ತೆಗೆದುಕೊಳ್ಳಲು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. ಸದರಿ ಪ್ರಾಜೆಕ್ಟ್‌ನ್ನು ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮೂರು ವರ್ಷಗಳ ಅವಧಿಗೆ ಪ್ರಾಯೋಗಿಕವಾಗಿ ಜಾರಿಗೆ ತರಲು ನಿರ್ಣಯಿಸಲಾಯಿತು. ಹಾಗು ಇದರ ಸದಸ್ಯತ್ವ ಪಡೆಯುವುದು ಯಾವುದೇ ವಿದ್ಯಾರ್ಥಿಗಳಿಗೆ ಕಡ್ಡಾಯವಲ್ಲ. ಸದಸ್ಯತ್ವ ಪಡೆಯುವುದು ಅಥವಾ ಪಡೆಯದೇ ಇರುವುದರ ಕುರಿತು ತೀರ್ಮಾನಿಸಲು ವಿದ್ಯಾರ್ಥಿಗಳ ಸ್ವಂತ ಇಚ್ಛೆಗೆ ಬಿಡಲು ತೀರ್ಮಾನಿಸಲಾಯಿತು.

**2022-ಸಿಂ-7.16(ಎ)** : ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಸೀಟು ಹೆಚ್ಚಳದ ಕುರಿತು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ಈಗಾಗಲೇ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರ ಸಭೆಯಲ್ಲಿ ಮೆರಿಟ್ ಕಂ ಪೇಮೆಂಟ್ ಸೀಟುಗಳನ್ನು ಮಾತ್ರ ಹೆಚ್ಚಿಸಲು ತೆಗೆದುಕೊಂಡ ನಿರ್ಣಯವನ್ನು ಸಭೆಯು ಗಮನಿಸಿ ಅದರಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಸೀಟು ಹೆಚ್ಚಳಕ್ಕೆ ಅನುಮೋದನೆ ನೀಡಿತು. ಹಾಗೂ ಹೆಚ್ಚು ಹೆಚ್ಚು ಸೆಲ್ಫ್ ಫೈನಾನ್ಸಿಯಲ್ ಕೋರ್ಸುಗಳನ್ನು ಪ್ರಾರಂಭಿಸಲು ಸಭೆಯು ಅನುಮತಿ ನೀಡಿತು.

**2022-ಸಿಂ-7.16(ಬಿ)**: 2022-23ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಪದವಿ, ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್ ಮತ್ತು ಪಿಹೆಚ್.ಡಿ. ಪದವಿಗಳ ಶುಲ್ಕಗಳನ್ನು ಪರಿಷ್ಕರಿಸಿರುವ ಕುರಿತು.

ನಿರ್ಣಯ : ಚರ್ಚೆಯ ನಂತರ 2022-23ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಪದವಿ, ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್ ಮತ್ತು ಪಿಹೆಚ್.ಡಿ. ಪದವಿಗಳ ಶುಲ್ಕಗಳನ್ನು ಪರಿಷ್ಕರಿಸಿರುವುದನ್ನು ಸಭೆಯು ಅನುಮೋದಿಸಿತು.

**2022-ಸಿಂ-7.16(ಸಿ)**: 2022-23ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿಗಳ / ಪ್ರಮಾಣ ಪತ್ರ / ಅನುಮತಿ ಪತ್ರಗಳ ಶುಲ್ಕಗಳನ್ನು ಪರಿಷ್ಕರಿಸಿರುವ ಕುರಿತು.

ನಿರ್ಣಯ : ಚರ್ಚೆಯ ನಂತರ 2022-23ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿಗಳ / ಪ್ರಮಾಣ ಪತ್ರ / ಅನುಮತಿ ಪತ್ರಗಳ ಶುಲ್ಕಗಳನ್ನು ಪರಿಷ್ಕರಿಸಿರುವುದನ್ನು ಸಭೆಯು ಅನುಮೋದಿಸಿತು.

## ದಾಸ್ತಾನು ಖರೀದಿ ವಿಭಾಗ

**2022–ಸಿಂ–7.17** : ವಿಶ್ವವಿದ್ಯಾಲಯದ ವಾಹನ ಸಂಖ್ಯೆ:ಕೆ.ಎ.14.ಎಂ.5453 ಅನುಪಯುಕ್ತ ಕ್ವಾಲಿಸ್ ಕಾರ್‌ನ್ನು ವಿಲೇವಾರಿ ಮಾಡಿರುವ ಕುರಿತು.

**ನಿರ್ಣಯ** : ವಿಶ್ವವಿದ್ಯಾಲಯದ ವಾಹನ ಸಂಖ್ಯೆ:ಕೆ.ಎ.14.ಎಂ.5453 ಅನುಪಯುಕ್ತ ಕ್ವಾಲಿಸ್ ಕಾರ್‌ನ್ನು ವಿಲೇವಾರಿ ಮಾಡಿರುವುದಕ್ಕೆ ಸಭೆಯು ಅನುಮೋದನೆ ನೀಡಿತು.

**2022–ಸಿಂ–7.17(ಎ)**: ಆಡಿಯೋ–ವಿಷ್ಯುಯಲ್ ಸ್ಟುಡಿಯೋಗೆ ಕಂಪ್ಯೂಟರ್ ಮತ್ತು ಇತರೆ ಪರಿಕರಗಳನ್ನು ಖರೀದಿಸುವ ಕುರಿತ – ಇ-ಟೆಂಡರ್ ಅಂಗೀಕರಿಸುವ ಕುರಿತು.

**ನಿರ್ಣಯ** : ಚರ್ಚೆಯ ನಂತರ ಸರ್ಕಾರದಿಂದ ಅನುದಾನ ಬಂದ ನಂತರ ಖರೀದಿಗೆ ಕ್ರಮಕೈಗೊಳ್ಳುವ ಷರತ್ತಿನೊಂದಿಗೆ ಆಡಿಯೋ–ವಿಷ್ಯುಯಲ್ ಸ್ಟುಡಿಯೋಗೆ ಕಂಪ್ಯೂಟರ್ ಮತ್ತು ಇತರೆ ಪರಿಕರಗಳನ್ನು ಖರೀದಿಸುವ ಕುರಿತ – ಇ-ಟೆಂಡರ್‌ನ್ನು ಸಭೆಯು ಅಂಗೀಕರಿಸಿತು.

## ಅಭಿವೃದ್ಧಿ ವಿಭಾಗ

**2022–ಸಿಂ–7.18** : ಕುವೆಂಪು ವಿಶ್ವವಿದ್ಯಾಲಯದೊಂದಿಗೆ ದಾವಣಗೆರೆ ವಿಶ್ವವಿದ್ಯಾಲಯ ಒಡಂಬಡಿಕೆಯನ್ನು (MOU) ಮಾಡಿಕೊಂಡಿರುವುದನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ** : ಕುವೆಂಪು ವಿಶ್ವವಿದ್ಯಾಲಯದೊಂದಿಗೆ ದಾವಣಗೆರೆ ವಿಶ್ವವಿದ್ಯಾಲಯದ ಒಡಂಬಡಿಕೆಯನ್ನು (MOU) ಮಾಡಿಕೊಂಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2022–ಸಿಂ–7.19** : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಕರ್ನಾಟಕ ಸರ್ಕಾರ ಹಾಗೂ National Stock Exchange Academy, (NSE) Pvt, Ltd., Mumbai ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ಅಳವಡಿಸುವ ಕುರಿತು.

**ನಿರ್ಣಯ** : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಕರ್ನಾಟಕ ಸರ್ಕಾರ ಹಾಗೂ National Stock Exchange Academy, (NSE) Pvt, Ltd., Mumbai ಇವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ಅಳವಡಿಸಲು ಸಭೆಯು ಅನುಮೋದನೆ ನೀಡಿತು.

**2022–ಸಿಂ–7.19(ಎ)**: ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಅಭಿವೃದ್ಧಿ ವಿಸ್ತರಣೆಗಾಗಿ ವಿದೇಶ ಪ್ರವಾಸ ಕೈಗೊಳ್ಳುವ ಕುರಿತು.

**ನಿರ್ಣಯ** : ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಅಭಿವೃದ್ಧಿ ವಿಸ್ತರಣೆಗಾಗಿ ವಿಶ್ವವಿದ್ಯಾಲಯವು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಕೆಲವು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡುವ ಸಂಬಂಧ ಸೆಪ್ಟೆಂಬರ್/ಅಕ್ಟೋಬರ್ 2022ರ ಮಾಹೆಯಲ್ಲಿ ಮಾನ್ಯ ಕುಲಪತಿಗಳು ವಿದೇಶಕ್ಕೆ ತೆರಳಲು ಸಭೆಯು ಅನುಮೋದನೆ ನೀಡಿತು.

## ಪರೀಕ್ಷಾ ವಿಭಾಗ

**2022–ಸಿಂ–7.08** : ಅಂತರರಾಷ್ಟ್ರೀಯ ಪಿ.ಹೆಚ್.ಡಿ, ಸಂಶೋಧನಾರ್ಥಿಗಳಿಗೆ ಕೋರ್ಸ್ ವರ್ಕ್ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ** : ಅಂತರರಾಷ್ಟ್ರೀಯ ಪಿ.ಹೆಚ್.ಡಿ, ಸಂಶೋಧನಾರ್ಥಿಗಳಿಗೆ ಕೋರ್ಸ್ ವರ್ಕ್ ಪರೀಕ್ಷಾ ಶುಲ್ಕವನ್ನು ಹೆಚ್ಚುವರಿಯಾಗಿ ನಿಗದಿಪಡಿಸಲು ಸಭೆಯು ಅನುಮೋದನೆ ನೀಡಿತು.

**2022–ಸಿಂ–7.08(ಎ) :** ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಖರೀದಿಗೆ ಸಂಬಂಧಪಟ್ಟ ಟೆಂಡರ್‌ನ ಅನುಮೋದನೆ ಕುರಿತು.

**ನಿರ್ಣಯ** : ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಮುದ್ರಣ/ಖರೀದಿಗೆ ಸಂಬಂಧಪಟ್ಟ ಟೆಂಡರ್ ಪ್ರಕ್ರಿಯೆ ನಡೆಸಿ M/s Hitech Print Systems Limited ಸಂಸ್ಥೆಯೊಂದಿಗೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಒಂದು ವರ್ಷದ ಅವಧಿಗೆ ಮಾಡಿಕೊಂಡಿರುವ ಕರಾರು ಒಪ್ಪಂದವನ್ನು ಸಭೆಯು ಅನುಮೋದಿಸಿತು.

**2022–ಸಿಂ–7.08(ಬಿ):** ಕುವೆಂಪು ವಿಶ್ವವಿದ್ಯಾಲಯದಲ್ಲಿ ನೂತನ ಶಿಕ್ಷಣ ನೀತಿ ಮತ್ತು ಯು.ಯು.ಸಿ.ಎಂ.ಎಸ್. ತಂತ್ರಾಂಶ ಅಳವಡಿಕೆ ಹಿನ್ನೆಲೆಯಲ್ಲಿ ಪರೀಕ್ಷಾ ಕಾರ್ಯಗಳ ಭತ್ಯೆ / ಸಂಭಾವನೆ ದರಗಳನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ** : ಕುವೆಂಪು ವಿಶ್ವವಿದ್ಯಾಲಯದಲ್ಲಿ ನೂತನ ಶಿಕ್ಷಣ ನೀತಿ ಮತ್ತು ಯು.ಯು.ಸಿ.ಎಂ.ಎಸ್. ತಂತ್ರಾಂಶ ಅಳವಡಿಕೆ ಹಿನ್ನೆಲೆಯಲ್ಲಿ ಪರೀಕ್ಷಾ ಕಾರ್ಯಗಳ ಭತ್ಯೆ / ಸಂಭಾವನೆ ದರಗಳನ್ನು ಪರಿಷ್ಕರಿಸಲು ಸಭೆಯು ಅನುಮೋದನೆ ನೀಡಿತು.

**2022–ಸಿಂ–7.08(ಸಿ) :** ಬಿ.ಇಡಿ. 1ನೇ ಸೆಮಿಸ್ಟರ್ ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸುವ ಹಾಗೂ ಪರಿಷ್ಕೃತ ಶುಲ್ಕ ಪಾವತಿಸುವ ಕುರಿತು.

**ನಿರ್ಣಯ** : ಬಿ.ಇಡಿ. ಪದವಿಯು ವೃತ್ತಿಪರ ಕೋರ್ಸ್ ಆಗಿರುವುದರಿಂದ NEPಯಡಿ ವೃತ್ತಿಪರ ಕೋರ್ಸುಗಳಿಗೆ ನಿಗದಿಪಡಿಸಲಾದ ಶುಲ್ಕಗಳನ್ನೇ ಬಿ,ಇಡಿ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೂ ಅನ್ವಯಿಸಿ UUCMS ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಲು ಹಾಗೂ ಪರಿಷ್ಕೃತ ಶುಲ್ಕ ಪಾವತಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

## ಹಣಕಾಸು ವಿಭಾಗ

**2022–ಸಿಂ–7.20 :** 2022–23ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

**ನಿರ್ಣಯ** : 2022–23ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ದೂರ ಶಿಕ್ಷಣ ನಿರ್ದೇಶನಾಲಯ

**2022–ಸಿಂ–7.20(ಎ):** 2019–20ನೇ ಸಾಲಿನ ದೂರ ಶಿಕ್ಷಣದ ವಿದ್ಯಾರ್ಥಿಗಳನ್ನು ಪ್ರಮೋಟ್ ಮಾಡಲಾಗಿರುವ ಕುರಿತು.

**ಚರ್ಚೆ:** ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಆದರೆ

ಸ್ನಾತಕೋತ್ತರ ಪದವಿಯ 2019–20ನೇ ಸಾಲಿನ 6685 ವಿದ್ಯಾರ್ಥಿಗಳ ಆಂತರಿಕ ಸಾರಲೇಖ(I.A)/ ಹೋಮ್ ಅಸೈನ್‌ಮೆಂಟ್ ಪುಸ್ತಕಗಳನ್ನು ಮೌಲ್ಯಮಾಪನ ಮಾಡಿಸಲು ಸ್ನಾತಕೋತ್ತರ ಬಿ.ಓ.ಇ. ಅಧ್ಯಕ್ಷರುಗಳಿಗೆ ಎರಡು ಬಾರಿ ಪತ್ರ ಬರೆದಿದ್ದರೂ ಸಹ ಸಂಬಂಧಿಸಿದವರು ಮೌಲ್ಯಮಾಪನದ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ವಿದ್ಯಾರ್ಥಿಗಳ ಫಲಿತಾಂಶವನ್ನು ಹೋಮ್ ಅಸೈನ್‌ಮೆಂಟ್‌ಗಳ ಅಂಕಗಳ ಆಧಾರದ ಮೇಲೆ ಪ್ರಕಟಿಸಬೇಕಾಗಿರುವುದರಿಂದ ಈ ಬಗ್ಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ಜುಲೈ 30ರೊಳಗೆ ದ್ವಿತೀಯ ಮತ್ತು ತೃತೀಯ ವರ್ಷದ ಪರೀಕ್ಷೆ ಮಾಡಿ ಮುಗಿಸಬೇಕಿತ್ತು. ಆದರೆ ಏನೂ ಆಗಿಲ್ಲ ಅಲ್ಲದೇ ಎಷ್ಟು ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಬೇಕು, ಎಷ್ಟು ವಿದ್ಯಾರ್ಥಿಗಳು ಸ್ನಾತಕ ಪದವಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂಬ ಮಾಹಿತಿಯನ್ನು ಕೇಳಿದರು.

ಕುಲಸಚಿವ(ಪರೀಕ್ಷಾಂಗ)ರವರು ಮಾಹಿತಿಯನ್ನು ನೀಡಿದರು ಹೆಚ್ಚಿನ ಮಾಹಿತಿಯನ್ನು ನೀಡಲು ಲಾಜಿಸಿಸ್ ಸಂಸ್ಥೆಯ ಶ್ರೀ ಚೇತನ್‌ರವರನ್ನು ಕರೆಸಿ ಮಾಹಿತಿ ಪಡೆಯಲಾಯಿತು.

ಸ್ನಾತಕೋತ್ತರ ಪದವಿಯ ಬಿ.ಓ.ಇ. ಅಧ್ಯಕ್ಷರುಗಳಿಗೆ ಹೋಮ್ ಅಸೈನ್‌ಮೆಂಟ್ ಪುಸ್ತಕಗಳನ್ನು ಮೌಲ್ಯಮಾಪನ ಮಾಡಿಕೊಡುವಂತೆ ಕೋರಿದರೂ ಕ್ರಮ ಕೈಗೊಂಡಿಲ್ಲ ಎಂಬ ಬಗ್ಗೆ ಚರ್ಚೆಯಾಯಿತು ನಂತರ ಈ ಬಗ್ಗೆ ಮಾಹಿತಿ ಪಡೆಯಲು ಸ್ನಾತಕೋತ್ತರ ಅಧ್ಯಾಪಕರುಗಳ ಸಂಘದ ಅಧ್ಯಕ್ಷರು ಅಥವಾ ಕಾರ್ಯದರ್ಶಿಯನ್ನು ಸಭೆಗೆ ಆಹ್ವಾನಿಸಲು ನಿರ್ಣಯಿಸಲಾಯಿತು ಆದರೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಲಭ್ಯವಿಲ್ಲದ ಕಾರಣ ಸ್ನಾತಕೋತ್ತರ ಅಧ್ಯಾಪಕರುಗಳ ಸಂಘದ ಉಪಾಧ್ಯಕ್ಷರಾದ ಪ್ರೊ. ಸರ್ವಮಂಗಳ, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ ಇವರನ್ನು ಸಭೆಗೆ ಕರೆಯಿಸಿ ಹೋಮ್ ಅಸೈನ್‌ಮೆಂಟ್ ಪುಸ್ತಕಗಳ ಮೌಲ್ಯಮಾಪನದ ಕುರಿತು ಮಾಹಿತಿ ನೀಡುವಂತೆ ಕೋರಲಾಯಿತು. ಸದರಿಯವರು ನಾವು ಸ್ನಾತಕೋತ್ತರ ಅಧ್ಯಾಪಕರುಗಳ ಸಂಘದ ಎಲ್ಲಾ ಅಧ್ಯಾಪಕರುಗಳು ಸೇರಿ ಒಗ್ಗಟ್ಟಿನಿಂದ ಹೋಮ್ ಅಸೈನ್‌ಮೆಂಟ್ ಪುಸ್ತಕಗಳನ್ನು ಮೌಲ್ಯಮಾಪನ ಮಾಡುವುದಿಲ್ಲ ಎಂದು ನಿರ್ಣಯ ಕೈಗೊಂಡಿರುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ಹಿಂದೆ ದಿನಾಂಕ:30-11-2021ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಯಾವುದೇ ವಿದ್ಯಾರ್ಥಿಗಳನ್ನು ಪ್ರಮೋಟ್ ಮಾಡಬಾರದು ಎಂಬ ನಿರ್ಣಯ ತೆಗೆದುಕೊಂಡಿದ್ದೆವು. ಸ್ನಾತಕೋತ್ತರ ಅಧ್ಯಾಪಕರುಗಳ ಸಂಘದ ಅಭಿಪ್ರಾಯದ ಮೇರೆಗೆ ಸದರಿ ನಿರ್ಣಯ ತೆಗೆದುಕೊಳ್ಳಲಾಗಿತ್ತು ಈಗ ನ್ಯಾಯಾಲಯ ನಿಮ್ಮ ವಿಶ್ವವಿದ್ಯಾಲಯದ ಗೊಂದಲದ ನಿರ್ಣಯಗಳಿಂದ ವಿದ್ಯಾರ್ಥಿಗಳು ಏಕೆ ತೊಂದರೆಗೊಳಗಾಗಬೇಕು ಅವರನ್ನು ಪ್ರಮೋಟ್ ಮಾಡಿ ಎಂದು ಹೇಳಿದೆ ಆದ್ದರಿಂದ ಪ್ರಮೋಟ್ ಮಾಡಲೇ ಬೇಕಾಗಿದೆ ಈಗ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಎಲ್ಲರೂ ಒಟ್ಟಾಗಿ ಹೋಗಬೇಕಾಗಿದ್ದು ಸಮಸ್ಯೆಯನ್ನು ಬಗೆ ಹರಿಸಬೇಕಾಗಿದೆ, ಇಲ್ಲದಿದ್ದರೆ ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬರುತ್ತದೆ ಆದ್ದರಿಂದ One time measure ಎಂದು ಹೋಮ್ ಅಸೈನ್‌ಮೆಂಟ್ ಪುಸ್ತಕಗಳನ್ನು ಮೌಲ್ಯಮಾಪನ ಮಾಡುವಂತೆ ಕೋರಿದರು.

ಡಾ. ಸಂತೋಷ್ ಕುಮಾರ್. ಸಹಾಯಕ ಪ್ರಾಧ್ಯಾಪಕರು ಜೈವಿಕ ತಂತ್ರಜ್ಞಾನ ವಿಭಾಗ ಹಾಗೂ ಉಪಕುಲಸಚಿವರು ಶೈಕ್ಷಣಿಕ ವಿಭಾಗ ಇವರು ಮಾತನಾಡಿ ದೂರಶಿಕ್ಷಣದ ಹೋಮ್ ಅಸೈನ್‌ಮೆಂಟ್‌ಗಳನ್ನು ಇದುವರೆಗೂ ಯಾವತ್ತೂ ಸ್ನಾತಕೋತ್ತರ ಅಧ್ಯಾಪಕರು ಮೌಲ್ಯ ಮಾಪನ ಮಾಡಿಲ್ಲ ಈಗ ಮಾಡುವುದು ನಿಯಮಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು.

ಪ್ರೊ. ಸರ್ವಮಂಗಳರವರು ಸ್ನಾತಕೋತ್ತರ ಅಧ್ಯಾಪಕರ ಸಂಘದ ಅಧ್ಯಕ್ಷರು ಮತ್ತು ಸದಸ್ಯರೊಂದಿಗೆ ಮಾತನಾಡುವಂತೆ ಸಿಂಡಿಕೇಟ್ ಸದಸ್ಯರನ್ನು ಕೋರಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಇದುವರೆಗೂ ದೂರಶಿಕ್ಷಣದ ಹೋಮ್ ಅಸೈನ್‌ಮೆಂಟ್‌ಗಳನ್ನು ಯಾರು ಮೌಲ್ಯ ಮಾಪನ ಮಾಡುತ್ತಿದ್ದರು ಎಂದು ಕೇಳಿದರು. ಕುಲಸಚಿವ(ಪರೀಕ್ಷಾಂಗ)ರವರು ಅಧ್ಯಯನ ಕೇಂದ್ರದವರೇ ಮೌಲ್ಯಮಾಪನ ಮಾಡುತ್ತಿದ್ದರು ಎಂದು ಹೇಳಿದರು. ಅದಕ್ಕೆ ಶ್ರೀ ಬಿ. ನಿರಂಜನಮೂರ್ತಿಯವರು ಹಾಗಿದ್ದಲ್ಲಿ ಅಧ್ಯಯನ ಕೇಂದ್ರದವರಿಂದಲೇ ಮೌಲ್ಯಮಾಪನ ಮಾಡಿಸಬಹುದು ಎಂದು ಹೇಳಿದರು. ಇದಕ್ಕೆ ಪ್ರೊ. ರಿಯಾಜ್ ಮಹಮೂದ್ ಮತ್ತು ಶ್ರೀ ಧರ್ಮಪ್ರಸಾದ್‌ರವರು ತಮ್ಮ ಸಹಮತ ವ್ಯಕ್ತಪಡಿಸಿದರು.

ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಫೇಲ್ ಎನ್ನುವುದು ಸರಿ ಆದರೆ ವಿಥ್ ಹೆಲ್ಡ್ ಎಂದರೆ ಏನು ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರು(ಪರೀಕ್ಷಾಂಗ)ರವರು ಯಾರು ಆಂತರಿಕ ಸಾರಲೇಖ ಪುಸ್ತಕ/ಹೋಮ್ ಅಸೈನ್‌ಮೆಂಟ್‌ಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲವೋ ಅವರನ್ನು ವಿಥ್ ಹೆಲ್ಡ್ ಎಂದು ತೋರಿಸಲಾಗುತ್ತದೆ ಎಂದು ಹೇಳಿದರು.
ಸದಸ್ಯರಾದ ಶ್ರೀ ಎನ್. ಆರ್ ಮಂಜುನಾಥ್‌ರವರು ಮಾತನಾಡಿ ಯಾರು ಆಂತರಿಕ ಸಾರಲೇಖ ಸಲ್ಲಿಸಿರುವುದಿಲ್ಲವೋ ಅವರಿಗೆ ಹಾಗೂ ಫೇಲ್ ಆದವರಿಗೆ ಪುನ: ಪರೀಕ್ಷೆ ಮಾಡಬೇಕು ಎಂದರು.

ಕುಲಸಚಿವರು(ಆಡಳಿತ) ಇವರು ಮಾತನಾಡಿ ಯುಜಿಸಿ ಅಪ್-ಲೋಡ್ ಮಾಡುವುದಕ್ಕೆ ಸಮಯ ನೀಡಿರುತ್ತದೆ. ಆದ್ದರಿಂದ ಯುಜಿಸಿ ಪೋರ್ಟಲ್‌ನಲ್ಲಿ ಅಪ್ ಲೋಡ್ ಆಗಿದ್ದರೆ ಮಾತ್ರ ನಿಯಮಾನುಸಾರ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಫಲಿತಾಂಶವನ್ನು ನೀಡುವ ಕುರಿತು

ಉಚ್ಚ ನ್ಯಾಯಾಲಯದ ನಿರ್ಣಯದಂತೆ ಹಾಗೂ ಯುಜಿಸಿ ಮತ್ತು ಸರ್ಕಾರದ ನಿಯಮಾವಳಿಗಳಂತೆ ಮುಂದುವರೆಯಲು ತಿಳಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಯುಜಿಸಿಗೆ ಅಪ್-ಲೋಡ್ ಮಾಡಿರಬಹುದು ಆದರೆ ಶುಲ್ಕ ಕಟ್ಟಿರುವುದಿಲ್ಲ ಅವರನ್ನು ಪರಿಗಣಿಸಲು ಬರುವುದಿಲ್ಲ ಎಂದರು.

ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಯುಜಿಸಿಗೆ ಅಪ್-ಲೋಡ್ ಆಗಿರುವವರು ಪರೀಕ್ಷೆ ತೆಗೆದುಕೊಳ್ಳಲು ಆಸಕ್ತಿಯಿದ್ದಲ್ಲಿ ಶುಲ್ಕ ಕಟ್ಟಿ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಬಹುದು ಒಂದು ವೇಳೆ ಶುಲ್ಕ ಪಾವತಿಸಿದ್ದಲ್ಲಿ, ದಂಡಶುಲ್ಕ ಪಾವತಿಸಲು ತಿಳಿಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್‌ರವರು ಮಾತನಾಡಿ ಅಧ್ಯಯನ ಕೇಂದ್ರದವರಿಗೆ ಪತ್ರ ಬರೆದು ಎಷ್ಟು ಜನ ವಿದ್ಯಾರ್ಥಿಗಳು ಯುಜಿಸಿ ಪೋರ್ಟಲ್‌ನಲ್ಲಿ ಅಪ್-ಲೋಡ್ ಆಗಿದ್ದಾರೆ, ಎಷ್ಟು ಜನ ವಿದ್ಯಾರ್ಥಿಗಳು ಶುಲ್ಕ ಕಟ್ಟಿದ್ದಾರೆ, ಎಷ್ಟು ಜನ ವಿದ್ಯಾರ್ಥಿಗಳು ಶುಲ್ಕ ಪಾವತಿಸಬೇಕು ಎಂಬದನ್ನು ಪರಿಶೀಲಿಸಿ ಅವರು ಶುಲ್ಕ ಪಾವತಿಸಿದಲ್ಲಿ ಪರೀಕ್ಷೆ ನಡೆಸಲಾಗುವುದು ಎಂಬ ಮಾಹಿತಿಯನ್ನು ತಿಳಿಸಬಹುದು ಎಂದು ಹೇಳಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಈ ಕೆಳಕಂಡಂತೆ ನಿರ್ಣಯಿಸಲಾಯಿತು.
ದೂರ ಶಿಕ್ಷಣದ ಸ್ನಾತಕೋತ್ತರ ಪದವಿಯ ಹೋಮ್ ಅಸ್ಯೆನ್‌ಮೆಂಟ್ ಪುಸ್ತಕಗಳನ್ನು ಸ್ನಾತಕೋತ್ತರ ಪದವಿಯ ಅಧ್ಯಾಪಕರುಗಳು ಮೌಲ್ಯಮಾಪನ ಮಾಡಲು ಒಪ್ಪದೇ ಇರುವುದರಿಂದ, ಈ ಹಿಂದಿನಂತೆ ಆಯಾ ಅಧ್ಯಯನ ಕೇಂದ್ರಗಳಿಗೆ ಕಳುಹಿಸಿ ಮೌಲ್ಯಮಾಪನ ಮಾಡಿಸಿ ಅಂಕಗಳನ್ನು ತರಿಸಿಕೊಳ್ಳಲು ಸಭೆಯು ನಿರ್ಣಯಿಸಿತು.

1) ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ವಿದ್ಯಾರ್ಥಿಗಳ ಆಂತರಿಕ ಸಾರಲೇಖ/ ಹೋಮ್ ಅಸ್ಯೆನ್‌ಮೆಂಟ್ ಮೌಲ್ಯಮಾಪನದ ಅಂಕಗಳ ಆಧಾರದ ಮೇಲೆ ಫಲಿತಾಂಶವನ್ನು ಪ್ರಕಟಿಸುವುದು.
2) ಯಾವ ವಿದ್ಯಾರ್ಥಿಗಳು ಆಂತರಿಕ ಸಾರಲೇಖ/ ಹೋಮ್ ಅಸ್ಯೆನ್‌ಮೆಂಟ್ ಮೌಲ್ಯಮಾಪನದಲ್ಲಿ ಅನುತ್ತೀರ್ಣರಾಗಿರುತ್ತಾರೋ ಅಂತಹ ವಿದ್ಯಾರ್ಥಿಗಳು ಮುಂದೆ ನಡೆಸಲಾಗುವ ದೂರ ಶಿಕ್ಷಣದ ಸಾಮಾನ್ಯ ಪರೀಕ್ಷೆಗಳನ್ನು ತೆಗೆದುಕೊಳ್ಳತಕ್ಕದ್ದು.
3) ಯಾವ ವಿದ್ಯಾರ್ಥಿಗಳು ಆಂತರಿಕ ಸಾರಲೇಖ/ ಹೋಮ್ ಅಸ್ಯೆನ್‌ಮೆಂಟ್ ಪುಸ್ತಕಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲವೋ ಅವರನ್ನು ಅನುತ್ತೀರ್ಣ ವಿದ್ಯಾರ್ಥಿಗಳು ಎಂದು ಪರಿಗಣಿಸುವುದು. ಈ ವಿದ್ಯಾರ್ಥಿಗಳೂ ಕೂಡ ಮುಂದೆ ನಡೆಸಲಾಗುವ ದೂರ ಶಿಕ್ಷಣದ ಸಾಮಾನ್ಯ ಪರೀಕ್ಷೆಗಳನ್ನು ತೆಗೆದುಕೊಳ್ಳತಕ್ಕದ್ದು.
4) ಯಾವ ವಿದ್ಯಾರ್ಥಿಗಳಿಗೆ ಹಾಜರಾತಿ ಅಂಕಗಳು ಲಭ್ಯವಿರುವುದಿಲ್ಲವೋ ಅಂತಹ ವಿದ್ಯಾರ್ಥಿಗಳಿಗೆ ಆಯಾ ಅಧ್ಯಯನ ಕೇಂದ್ರಗಳಿಂದಲೇ ಹಾಜರಾತಿ ಅಂಕಗಳನ್ನು ತರಿಸಿಕೊಳ್ಳಬೇಕು.
5) ಈ ಕುರಿತು ಅಧ್ಯಯನ ಕೇಂದ್ರದವರಿಗೆ ಪತ್ರ ಬರೆದು ಎಷ್ಟು ಜನ ವಿದ್ಯಾರ್ಥಿಗಳು ಯುಜಿಸಿ ಪೋರ್ಟಲ್‌ನಲ್ಲಿ ಅಪ್-ಲೋಡ್ ಆಗಿದ್ದಾರೆ, ಎಷ್ಟು ಜನ ವಿದ್ಯಾರ್ಥಿಗಳು ಶುಲ್ಕ ಕಟ್ಟಿದ್ದಾರೆ, ಎಷ್ಟು ಜನ ವಿದ್ಯಾರ್ಥಿಗಳು ಶುಲ್ಕ ಪಾವತಿಸಬೇಕು ಎಂಬದನ್ನು ಪರಿಶೀಲಿಸಿದ ನಂತರ ಶುಲ್ಕಗಳನ್ನು ಪಾವತಿಸಿದ್ದಲ್ಲಿ ಪರೀಕ್ಷೆ ನಡೆಸುವುದು

**2022-ಸಿಂ-7.20(ಬಿ):** ಶ್ರೀ ನಾಗಾರ್ಜುನ ಎಸ್. ಇವರ ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಯ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಶ್ರೀ ನಾಗಾರ್ಜುನ ಎಸ್. ಇವರ ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಹೆಚ್. ಬಿ. ರವೀಂದ್ರನಾಥ್ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ಅಧ್ಯಕ್ಷತೆಯ ಸಮಿತಿಯು ವರದಿಯನ್ನು ಸಭೆಯು ಒಪ್ಪಿತು.

**2022- ಸಿಂ-7.20(ಬಿ)(1):** ದಿನಾಂಕ:11-07-2022ರಂದು ನಡೆದ ದೂರಶಿಕ್ಷಣದ ಮೇಲ್ವಿಚಾರಣಾ ಸಮಿತಿಯ ಸಭಾ ನಡಾವಳಿಯ ದೃಢೀಕರಣ ಕುರಿತು.

**ನಿರ್ಣಯ** : ದಿನಾಂಕ:11-07-2022ರಂದು ನಡೆದ ದೂರಶಿಕ್ಷಣದ ಮೇಲ್ವಿಚಾರಣಾ ಸಮಿತಿ ಸಭಾ ನಡಾವಳಿಗಳನ್ನು ಸಭೆಯು ಅನುಮೋದಿಸಿ ದೃಢೀಕರಿಸಿತು.

## ಎಸ್ಟೇಟ್ ವಿಭಾಗ

**2022-ಸಿಂ-7.20(ಸಿ):** ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ, ಸ್ವಚ್ಛತಾ ಮತ್ತು ತೋಟಗಾರಿಕಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಮೆ॥ ಕೆ.ಎಸ್.ಎಫ್-9, ಬೆಂಗಳೂರು ಇವರಿಗೆ ಹೊರಡಿಸಲಾದ ಕಾರ್ಯಾದೇಶವನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ, ಸ್ವಚ್ಛತಾ ಮತ್ತು ತೋಟಗಾರಿಕಾ ಸಿಬ್ಬಂದಿಗಳ ಒದಗಿಸಲು ಮೆ॥ಕೆ.ಎಸ್.ಎಫ್.-9, ಬೆಂಗಳೂರು ಇವರಿಗೆ ಹೊರಡಿಸಲಾದ ಕಾರ್ಯಾದೇಶವನ್ನು ಸಭೆಯು ಸ್ಥಿರೀಕರಿಸಿತು.

## ದಿನಾಂಕ:08-03-2022 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ

## ಯು.ಸಿ.ಸಿ.ಎಫ್. ವಿಭಾಗ

**2022-ಸಿಂ-1.35:** ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಇ-ಆಫೀಸ್ ತಂತ್ರಾಂಶವನ್ನು ಅಳವಡಿಸಿಕೊಂಡು ಜಾರಿಗೊಳಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಇ-ಆಫೀಸ್ ತಂತ್ರಾಂಶವನ್ನು ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಲ್ಲೂ ಅಳವಡಿಸಿಕೊಂಡು ಜಾರಿಗೊಳಿಸುವ ಬಗ್ಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.

**2022-ಸಿಂ-7.21: ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

1) **ಶ್ರೀ ರಾಮಲಿಂಗಪ್ಪ ಹೆಚ್.**

1) **ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳನ್ನು ನೀಡಿರುವ ಕುರಿತು.**

ಸದಸ್ಯರಾದ ಶ್ರೀ ಹೆಚ್ ರಾಮಲಿಂಗಪ್ಪರವರು ಮಾತನಾಡಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ಉದ್ದೇಶಪೂರ್ವಕವಾಗಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳನ್ನು ನೀಡಿರುತ್ತಾರೆ ಎಂಬ ದೂರು ವಿದ್ಯಾರ್ಥಿಗಳಿಂದ ಬಂದಿರುತ್ತದೆ. ಆದ್ದರಿಂದ ಸದರಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಇನ್ನೊಮ್ಮೆ ಮೌಲ್ಯಮಾಪನ ಮಾಡಿಸಿಕೊಡುವಂತೆ ಕೋರಿದರು.

ನಿರ್ಣಯ : ಚರ್ಚೆಯ ನಂತರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸದಲ್ಲಿ ಮರು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಶುಲ್ಕ ಪಾವತಿಸಿಕೊಂಡು ಮೌಲ್ಯಮಾಪನಕ್ಕೆ ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಿತು.

2) **ಪ್ರೊ. ಎಸ್.ಎಸ್. ಪಾಟೀಲ್ ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ವಿಭಾಗ ಇವರಿಗೆ ಸೆಬ್ಯಾಟಿಕಲ್ ಲೀವ್ ನೀಡುವ ಕುರಿತು.**

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಎಸ್. ಎಸ್. ಪಾಟೀಲ್ ಸ್ನಾತಕೋತ್ತರ ಶಿಕ್ಷಣ ವಿಭಾಗ ಇವರಿಗೆ ಸೆಬ್ಯಾಟಿಕಲ್ ರಜೆ ನೀಡುವಂತೆ ಕೋರಿದರು. ಸದಸ್ಯರಾದ ಶ್ರೀ ಹೆಚ್. ಬಿ. ರಮೇಶ್‌ಬಾಬುರವರು ಸಹ ನಿಯಮಾನುಸಾರ ಪರಿಶೀಲಿಸಿ ಸದರಿಯವರಿಂದ ಆರೋಗ್ಯದ ದೃಢೀಕರಣದ ಪತ್ರವನ್ನು ಪಡೆದು ಸೆಬ್ಯಾಟಿಕಲ್ ರಜೆ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ ಪ್ರೊ. ಎಸ್.ಎಸ್. ಪಾಟೀಲ್‌ರವರು ಆರೋಗ್ಯ ದೃಢೀಕರಣ ಪತ್ರ ನೀಡದಲ್ಲಿ ನಿಯಮಾನುಸಾರ ಪರಿಶೀಲಿಸುವುದಾಗಿ ತಿಳಿಸಿದರು.

3) **ಎಸ್.ಸಿ/ಎಸ್.ಟಿ.ಫೆಲೋಶಿಫ್**

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ನೀಡುವ ಫೆಲೋಶಿಫ್ ಮೊತ್ತವನ್ನು ಹೆಚ್ಚಿಸುವಂತೆ ಕೋರಿದರು.

ಕುಲಸಚಿವರು ಮಾತನಾಡಿ ಈ ವಿಷಯವನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತರಲಾಗಿದೆ. ಅವರೇ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕಾಮನ್ ಆಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಆಂತರಿಕ ಸಂಪನ್ಮೂಲ ಇಲ್ಲದೇ ಇರುವುದರಿಂದ ಸರ್ಕಾರದ ಸಹಾಯವಿಲ್ಲದೇ ಹೆಚ್ಚುವರಿ ಮಾಡುವುದು ಕಷ್ಟವಾಗುತ್ತದೆ ಎಂದು ಹೇಳಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

4) **ವಿಲಿನೀಕರಣ ಹೊಂದಿದ ನೌಕರರಿಗೆ ಸೇವೆಗೆ ಸೇರಿದ ದಿನಾಂಕದಿಂದ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ.**

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ವಿಲಿನೀಕರಣ ಹೊಂದಿದ ನೌಕರರಿಗೆ ಸೇವೆಗೆ ಸೇರಿದ ದಿನಾಂಕದಿಂದ ಸೇವಾ ಸೌಲಭ್ಯಗಳನ್ನು ವಿಸ್ತರಿಸುವಂತೆ ಈ ಹಿಂದೆ ನಿರ್ಣಯ ಆಗಿದ್ದು ಅದನ್ನು ಜಾರಿಗೆ ತರುವಂತೆ ಕೋರಿದರು. ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ರವರು ಈ ಹಿಂದೆ 12 ಜನ ನೌಕರರಿಗೆ ಯಾವ ರೀತಿ ಸೇವಾ ಸೌಲಭ್ಯಗಳನ್ನು ವಿಸ್ತರಿಸಲಾಗಿದೆಯೋ ಅದೇ ರೀತಿ ವಿಲಿನೀಕರಣಗೊಂಡ 133 ಜನ ನೌಕರರಿಗೂ ಸೇವಾ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂದು ಹೇಳಿದರು.

ಕುಲಸಚಿವರು ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

5) **ರಜಾ ಪ್ರಯಾಣ ರಿಯಾಯಿತಿ (ಎಲ್.ಟಿ.ಸಿ.) ಮೊತ್ತವನ್ನು ಬಿಡುಗಡೆ ಮಾಡುವ ಕುರಿತು.**

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ವಿಶ್ವವಿದ್ಯಾಲಯದ ಸರ್ಕಾರವು ಸರ್ಕಾರಿ ನೌಕರರಿಗೆ ಅವರ ಸೇವಾ ಅವಧಿಯಲ್ಲಿ 2 ಬಾರಿ ಎಲ್.ಟಿ.ಸಿ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿರುವ ಪ್ರಕಾರ ವಿಶ್ವವಿದ್ಯಾಲಯದ ಇಬ್ಬರು ನೌಕರರು ಸದರಿ ಸೌಲಭ್ಯವನ್ನು ಬಳಸಿಕೊಳ್ಳಲು ಅರ್ಜಿ ಸಲ್ಲಿಸಿದ್ದು ವಿಶ್ವವಿದ್ಯಾಲಯವು ಅನುಮತಿ ನೀಡಿದ ಮೇರೆಗೆ ಟೂರ್ ಹೋಗಿ ಬಂದಿದ್ದಾರೆ. ಆದರೆ ವಿಶ್ವವಿದ್ಯಾಲಯದ ಆದೇಶವಾಗಿದ್ದು ಈ ಸಂಬಂಧ ಹಣ ಬಿಡುಗಡೆಯಾಗಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ತಕ್ಷಣ ಹಣ ಬಿಡುಗಡೆ ಮಾಡುವಂತೆ ಕೋರಿದರು.

**ನಿರ್ಣಯ** : ಸಭೆಯು ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿತು.

2) **ಶ್ರೀಮತಿ ಕಿರಣ ರವೀಂದ್ರ ದೇಸಾಯಿ**

**ಪ್ರೊ. ಕೇಶವ ಶರ್ಮ ನಿವೃತ್ತ ಪ್ರಾಧ್ಯಾಪಕರು ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾಲಯ, ಇವರು ಕನ್ನಡ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಅವಕಾಶ ನೀಡಲು ಕೋರಿ.**

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಪ್ರೊ. ಕೇಶವ ಶರ್ಮ ನಿವೃತ್ತ ಪ್ರಾಧ್ಯಾಪಕರು, ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾಲಯ, ಇವರು ಕನ್ನಡ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಅವಕಾಶ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ನಿವೃತ್ತರಾದ ಪ್ರಾಧ್ಯಾಪಕರನ್ನು ಪುನ: ಸಂದರ್ಶಕ

ಪ್ರಾಧ್ಯಾಪಕರಾಗಿ ನೇಮಕ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಈ ಹಿಂದೆ ಈ ರೂಢಿ ಇತ್ತು ಆದರೆ ಈಗ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದ ಕಾರಣ ಈಗ ಕಷ್ಟವಾಗುತ್ತದೆ. ಆದರೆ ಪ್ರಸ್ತುತ ಹೆಚ್ಚಿನ ಪ್ರಾಧ್ಯಾಪಕರುಗಳು ವಯೋನಿವೃತ್ತಿ ಹೊಂದುತ್ತಿರುವುದರಿಂದ ವಿಶ್ವವಿದ್ಯಾಲಯದಲ್ಲಿ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವ ದೃಷ್ಟಿಯಿಂದ ವಯೋನಿವೃತ್ತಿ ಹೊಂದಿದ ಪ್ರಾಧ್ಯಾಪಕರನ್ನು ಸಂದರ್ಶಕ ಪ್ರಾಧ್ಯಾಪಕರೆಂದು ನೇಮಕ ಮಾಡಿಕೊಳ್ಳಬಹುದು ಎಂದು ಹೇಳಿದರು. ಆದರೆ ಹಾಗೆ ಮಾಡಿದಲ್ಲಿ ವರ್ಕ್ ಲೋಡ್ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

ನಿರ್ಣಯ: ಚರ್ಚೆಯ ನಂತರ ಸ್ನಾತಕೋತ್ತರ ವಿಭಾಗಗಳಿಂದ ಕೋರಿಕೆ ಬಂದಲ್ಲಿ ವಿಭಾಗಗಳಲ್ಲಿ ಖಾಯಂ ಅಧ್ಯಾಪಕರುಗಳ ಲಭ್ಯತೆಯನ್ನು ಪರಿಗಣಿಸಿ ಅನಿವಾರ್ಯ ಎಂದು ಕಂಡು ಬಂದಲ್ಲಿ ಸಂದರ್ಶಕ ಪ್ರಾಧ್ಯಾಪಕರನ್ನು ಪ್ರತಿ ಸಂದರ್ಶನಕ್ಕೆ ರೂಪಾಯಿ 1500-00 (ಒಂದು ಸಾವಿರದ ಐನೂರು ರೂಪಾಯಿಗಳು ಮಾತ್ರ) ಗೌರವಧನದ ಆಧಾರದ ಮೇಲೆ ನೇಮಿಸುವ ಕುರಿತು ನಿಯಮಾನುಸಾರ ಪರಿಶೀಲಿಸಲು ಸಭೆಯು ಅನುಮತಿ ನೀಡಿತು.

3) <u>ಶ್ರೀ ಹೆಚ್.ಬಿ.ರಮೇಶ್‌ಬಾಬು</u>

**ಇಬ್ಬರು ನೌಕರರಿಗೆ ಅಕ್ರಮವಾಗಿ ವೇತನ ನಿಗದೀಕರಣ ಮಾಡಿರುವ ಕುರಿತು.**

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡಿ ಇಬ್ಬರು ಸಹಾಯಕ ಕುಲಸಚಿವರಿಗೆ ಅಕ್ರಮವಾಗಿ ವೇತನ ನಿಗದೀಕರಣ ಮಾಡಿ ಬಾಕಿ ವೇತನ ಪಾವತಿ ಮಾಡಿರುವ ಬಗ್ಗೆ ತನಿಖೆ ಕೈಗೊಳ್ಳಬೇಕು ಎಂದು ಈ ಹಿಂದೆ ದಿನಾಂಕ: 04-06-2022ರಂದು ಪತ್ರ ನೀಡಿದರೂ ಈವರೆಗೂ ತನಿಖೆ ಕೈಗೊಂಡಿರುವುದಿಲ್ಲ ಏಕೆ ಎಂದು ಪ್ರಶ್ನಿಸಿದರು. ಸದರಿಯವರ ನೇಮಕಾತಿ, ವಿಲೀನೀಕರಣ ಮೀಸಲಾತಿ ಪಾಲನೆ ಮಾಡದೇ ಇರುವ ಬಗ್ಗೆ ವಿಚಾರಣೆ ಮಾಡಲು ಕೋರಿದರು.

ನಿರ್ಣಯ : ಚರ್ಚೆಯ ನಂತರ ಈ ವಿಷಯದ ಕುರಿತು ಪರಿಶೀಲಿಸಲು ಸಿಂಡಿಕೇಟ್ ಸದಸ್ಯರು ಸೇರಿದಂತೆ ಒಂದು ಸಮಿತಿಯನ್ನು ರಚಿಸಿ ಸತ್ಯಾಸತ್ಯತೆಯ ಬಗ್ಗೆ ವರದಿಯನ್ನು ಪಡೆಯುವಂತೆ ಮಾನ್ಯ ಕುಲಪತಿಗಳು ಸೂಚಿಸಿದರು.

4) <u>ಶ್ರೀ ಧರ್ಮಪ್ರಸಾದ್ ಜಿ.</u>

**ಅತಿಥಿ ಉಪನ್ಯಾಸಕರ ಸೇವಾವಧಿ ಕುರಿತು.**

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮುಂದುವರೆಸಬೇಕು. ಅವರ ಸೇವಾವಧಿಯನ್ನು ಪರಿಗಣಿಸುವಾಗ ಅತಿಥಿ ಉಪನ್ಯಾಸಕರು ಒಂದು ವರ್ಷದಲ್ಲಿ ಎರಡು ಮೂರು ತಿಂಗಳು ಸೇವೆ ಸಲ್ಲಿಸಿದ್ದರೂ ಅದನ್ನು ಒಂದು ವರ್ಷ ಸೇವಾವಧಿ ಎಂದು ಪರಿಗಣಿಸಬೇಕು ಎಂದು ಕೋರಿದರು.

ಕುಲಸಚಿವರು ನಿಯಮಾನುಸಾರ ಪರಿಶೀಲಿಸುವುದಾಗಿ ತಿಳಿಸಿದರು.

**2022-ಸಿಂ-7.22: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ THE STATUTES RELATING TO APPOINTMENT AND PROMOTION OF TEACHERS OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE KUVEMPU UNIVERSITY, AS PER THE UGC REGULATIONS 2018.**

ನಿರ್ಣಯ : THE STATUTES RELATING TO APPOINTMENT AND PROMOTION OF TEACHERS OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE KUVEMPU UNIVERSITY, AS PER THE UGC REGULATIONS 2018. ಈ ಪರಿನಿಯಮದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಲು ಅನುಮತಿಸಿ ಪರಿನಿಯಮವನ್ನು ಸಭೆಯು ಅನುಮೋದಿಸಿತು.

**2022–ಸಿಂ–7.23: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

01) ಶ್ರೀ ಅಶೋಕ್ ವಿ. ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ- ಪ್ರಸ್ತುತ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಸೇವೆಯಿಂದ ಅಮಾನತ್ತು ಮಾಡುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಶ್ರೀ ಅಶೋಕ್ ವಿ., ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ- ಪ್ರಸ್ತುತ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಕುರಿತು ಸರ್ಕಾರದಿಂದ ಪತ್ರ ಬಂದಿದ್ದು, ಅವ್ಯವಹಾರ / ಹಣ ದುರುಪಯೋಗ / ಕೆಟಿಟಿಪಿ ಕಾಯ್ದೆ ಉಲ್ಲಂಘನೆ ಮಾಡಿರುವ ಇವರನ್ನು ಅಮಾನತ್ತುಗೊಳಿಸಲು ಸಕ್ಷಮ ಪ್ರಾಧಿಕಾರವಾದ ಕುವೆಂಪು ವಿಶ್ವವಿದ್ಯಾಲಯವು ಸಂಬಂಧಪಟ್ಟ ಪ್ರಾಧಿಕಾರದ ಅನುಮೋದನೆ ಪಡೆದು ಸರ್ಕಾರಕ್ಕೆ ವರದಿ ನೀಡುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಈ ಕುರಿತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆಯಲಾಗಿದ್ದು ಸಭೆಯ ಗಮನಕ್ಕಾಗಿ ಮಂಡಿಸಿದೆ ಎಂದು ಹೇಳಿದರು.

**ನಿರ್ಣಯ:** ಚರ್ಚೆಯ ನಂತರ ಶ್ರೀ ಅಶೋಕ್ ವಿ. ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ- ಪ್ರಸ್ತುತ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಮೂಲತಃ ಕುವೆಂಪು ವಿಶ್ವವಿದ್ಯಾಲಯದ ನೌಕರರಾಗಿದ್ದು ಅವರ ಮೇಲೆ ಭ್ರಷ್ಟಾಚಾರ ಮತ್ತು ಹಣ ದುರುಪಯೋಗದ ಆರೋಪ ಬಂದಿರುವುದರಿಂದ ಹಾಗೂ ಇವರ ಪ್ರಕರಣ ನ್ಯಾಯಾಲಯದಲ್ಲಿ Stay ಇರುವುದರಿಂದ ಹಾಗೂ ಅವರು ಬಂದು ನೀಡಿರುವ ಮನವಿಯ ಪ್ರಕಾರ Quash ಆಗುವ ಎಲ್ಲಾ ಸಂದರ್ಭಗಳಿರುವುದರಿಂದ ಕುಲಪತಿಗಳು ಇದನ್ನು ಕುಲಂಕುಷವಾಗಿ ಚರ್ಚೆ ಮಾಡಿ ವಿಚಾರಣ ವರದಿ ನೀಡಲು ಆದೇಶಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

**ಸಹಿ/–**
**ಕುಲಪತಿಗಳು**